ಓಎಸ್. **121/2016**

ಪಿಡಬ್ಲ್ಯೂ-**1**

ದಿನಾಂಕ **27.01.2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ- ಪ್ರತಿವಾದಿಗಳ ಪರ ವಕೀಲರಾದ ಶ್ರೀ ಬಿ.ಎಸ್.ಪಿ ರವರಿಂದಃ-**

ದಿನಾಂಕ **26.04.2010** ರ ಕರಾರುಪತ್ರದಡಿ ನಾನು **10** ಸೆಂಟ್ಸ್ ಜಾಗದ ಸ್ವಾಧೀನವನ್ನು ಅದೇ ದಿನ ಮಾರಾಟಗಾರರಿಂದ ಪಡೆದುಕೊಂಡಿರುತ್ತೇನೆ. ನಾನು ಸರ್ವೆ ನಂ. **160/1** ರ **97** ಸೆಂಟ್ಸ್ ಪೈಕಿ **10** ಸೆಂಟ್ಸ್ ಜಾಗವನ್ನು ಖರೀದಿಸಿರುತ್ತೇನೆ. ಸದರಿ **10** ಸೆಂಟ್ಸ್ ಜಾಗದ ಸುತ್ತಲೂ ನಾನು ತಂತಿ ಬೇಲಿ ಹಾಕಿ, ಕಾಫಿ, ಅಡಿಕೆ, ಬಾಳೆ ಮತ್ತು ಶುಂಠಿ ಬೆಳೆದಿರುತ್ತೇನೆ. ಸದರಿ **10** ಸೆಂಟ್ಸ್ ಜಾಗದಲ್ಲಿ ಕಟ್ಟಡ ನಿರ್ಮಿಸಲು ನಾನು ಅಡಿಪಾಯ ಹಾಕಿರುವುದಿಲ್ಲ. ಕ್ರಯದ ಕರಾರುಪತ್ರವನ್ನು ನಮ್ಮ ವಕೀಲರಾಗಿದ್ದ ಎನ್.ಜಿ ಕಾಮತ್ ರವರ ಕಛೇರಿಯಲ್ಲಿ ತಯಾರಿಸಲಾಗಿರುತ್ತದೆ. ನಾನು **10** ಸೆಂಟ್ಸ್ ಜಾಗದ ಸ್ವಾಧೀನವನ್ನು ಪಡೆಯುವ ಸಂದರ್ಭದಲ್ಲಿ ಅಳತೆ ಮಾಡಿಸಿದ್ದೆನು. ಅಳತೆಯನ್ನು ಕರಾರುಪತ್ರವನ್ನು ಮಾಡಿಕೊಳ್ಳುವುದಕ್ಕಿಂತ ಮೊದಲು ಮಾಡಿಸಿದ್ದೆನು.

ಅಳತೆ ಮಾಡಿಸಿ, **10** ಸೆಂಟ್ಸ್ ಜಾಗವನ್ನು ಗುರುತಿಸಿದ ನಂತರ ಕ್ರಯದ ಕರಾರುಪತ್ರವನ್ನು ಮಾಡಿಕೊಂಡಿರುತ್ತೇನೆ. ದಾವೆಯನ್ನು ದಾಖಲಿಸುವ ಸಂದರ್ಭದಲ್ಲಿ ಸರ್ವೆ ಸ್ಕೆಚ್ ಅನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಾನು ಕ್ರಯದ ಕರಾರುಪತ್ರವನ್ನು ಮಾಡಿಕೊಳ್ಳುವ ಸಂದರ್ಭದಲ್ಲಿ ದಾವಾ ಸರ್ವೆ ನಂಬರ್ ಸ್ವತ್ತಿಗೆ ಕಂದಾಯ ನಿಗಧಿಯಾಗಿರಲಿಲ್ಲ. **97** ಸೆಂಟ್ಸ್ ಜಾಗದ ಪೈಕಿ, **10** ಸೆಂಟ್ಸ್ ಅನ್ನು ನೋಂದಣಿ ಮಾಡಿಸಿಕೊಳ್ಳಬೇಕಾದರೆ **11** ಇ ನಕ್ಷೆಯ ಅಗತ್ಯತೆ ಇತ್ತು ಎಂದರೆ ಸರಿ. ಕಂದಾಯ ನಿಗದಿಯಾಗಿದ್ದ ಸ್ವತ್ತುಗಳಿಗೆ ಮಾತ್ರ **11** ಇ ನಕ್ಷೆಯನ್ನು ವಿತರಿಸುತ್ತಿದ್ದರು ಎಂದರೆ ಸರಿ. ಕಂದಾಯ ನಿಗದಿ ಪಡಿಸುವ ಕಾರ್ಯ ಮತ್ತು **11** ಇ ನಕ್ಷೆಯನ್ನು ತಯಾರಿಸುವ ಜವಾಬ್ದಾರಿಯನ್ನು ಕ್ರಯಪತ್ರದಡಿ ನಾನೇ ಪಡೆದುಕೊಂಡಿದ್ದೆನು ಎಂದರೆ ಸರಿ.

ಕ್ರಯಪತ್ರವನ್ನು ನೋಂದಣಿ ಮಾಡಿಕೊಳ್ಳುವ ನಿಗಧಿತ ಸಮಯವನ್ನು ಕರಾರುಪತ್ರದಲ್ಲಿ ನಮೂದಿಸಿರುವುದಿಲ್ಲ. ದಿನಾಂಕ ಏಪ್ರಿಲ್ 2016 ರಲ್ಲಿ ದಾವಾಸ್ವತ್ತಿಗೆ ಸಂಬಂಧಿಸಿದಂತೆ 11 ಇ ನಕ್ಷೆಯನ್ನು ಪ್ರತಿವಾದಿಗಳು ಪಡೆದಿರುವ ವಿಚಾರ ನನಗೆ ಗೊತ್ತಾಗಿರುತ್ತದೆ. ಬಳಿಕ ನಾನು ಕ್ರಯಪತ್ರವನ್ನು ನೋಂದಣಿ ಮಾಡಿಸಿಕೊಡುವಂತೆ ಕೋರಿ ಪ್ರತಿವಾದಿಗಳಿಗೆ ನನ್ನ ವಕೀಲರ ಮೂಲಕ ನೋಟೀಸನ್ನು ನೀಡಿರುವುದಿಲ್ಲ. ದಾವೆಯನ್ನು ದಾಖಲಿಸುವುದಕ್ಕಿಂತ ಪೂರ್ವದಲ್ಲಿ ನಾನು ನನ್ನ ವಕೀಲರ ಮೂಲಕ ಪ್ರತಿವಾದಿಗಳಿಗೆ ನೋಟೀಸನ್ನು ನೀಡಿರುವುದಿಲ್ಲ. ದಾವೆಯನ್ನು ದಾಖಲಿಸಿದ ಸಂದರ್ಭದಲ್ಲಿ ಕ್ರಯದ ಕರಾರುಪತ್ರದ ಪ್ರಕಾರ ಬಾಕಿ ಪ್ರತಿಫಲದ ಹಣವನ್ನು ನಾನು ನೀಡಲು ಸಿದ್ಧನಿದ್ದು, ಕ್ರಯಪತ್ರವನ್ನು ನೋಂದಣಿ ಮಾಡಿಸಿಕೊಡುವಂತೆ ಪ್ರತಿವಾದಿಗಳನ್ನು ಕೋರಿರುವ ಬಗ್ಗೆ ವಾದಪತ್ರದಲ್ಲಿ ನಮೂದು ಇರುವುದಿಲ್ಲ ಎಂದರೆ ನನಗೆ ನೆನಪಿಲ್ಲ. ಸಾಕ್ಷಿಯು ಮುಂದುವರೆದು ನಾನು ಮೌಖಿಕವಾಗಿ ಪ್ರತಿವಾದಿಗಳ ಬಳಿ ಕೇಳಿರುತ್ತೇನೆ ಎಂದು ಉತ್ತರಿಸಿರುತ್ತಾರೆ.

11 ಇ ನಕ್ಷೆಯನ್ನು ಪ್ರತಿವಾದಿಗಳು ಪಡೆದುಕೊಂಡಿರುವ ವಿಚಾರವನ್ನು ನಾನು ವಾದಪತ್ರದಲ್ಲಿ ಹೇಳಿರುತ್ತೇನೆ. ನಾನು ಪ್ರತಿವಾದಿಗಳು ಪಡೆದುಕೊಂಡಿದ್ದ 11 ಇ ನಕ್ಷೆಯನ್ನು ಸರ್ವೆ ಇಲಾಖೆಯಿಂದ ಪಡೆದುಕೊಂಡಿರುವುದಿಲ್ಲ. ಆ ರೀತಿ 11 ಇ ನಕ್ಷೆಯ ದೃಢೀಕೃತ ನಕ್ಷೆಯನ್ನು ಪಡೆದುಕೊಳ್ಳಬಹುದು ಎಂಬ ಬಗ್ಗೆ ನನಗೆ ಮಾಹಿತಿ ಇರಲಿಲ್ಲ. ನನ್ನ 10 ಸೆಂಟ್ಸ್ ಜಾಗದ ಉತ್ತರಕ್ಕೆ ಮಾರಾಟಗಾರರು ಉಳಿಕೆ ಜಾಗವನ್ನು ಉಳಿಸಿಕೊಂಡಿರುತ್ತಾರೆ. ಸದರಿ ಜಾಗದಲ್ಲಿ ಮನೆ ಮತ್ತು ಕಾಫಿ ಗಿಡಗಳು ಇವೆ. ಸರ್ವೆ ನಂ. 160/1 ರ ಪೂರ್ಣ ಸ್ವತ್ತಿಗೆ ಕಂದಾಯ ನಿಗಧಿಯಾಗಿತ್ತು. ಕಂದಾಯ ನಿಗಧಿಪಡಿಸುವ ಕಾರ್ಯವನ್ನು ನಾನೇ ಮಾಡಿರುತ್ತೇನೆ. ಸರ್ವೆ ನಂಬರ್ ನ ಜಮೀನಿನಲ್ಲಿ ಕಟ್ಟಡಗಳು ಇದ್ದರೆ ಅಂತಹ ಜಮೀನಿನ ಕಂದಾಯವನ್ನು ನಿಗಧಿ ಮಾಡುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ.

ಓಎಸ್. **121/2016**
ಪಿಡಬ್ಲ್ಯ-**1**

**ಮುಂದುವರೆದ ಪಾಟೀ ಸವಾಲನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು**.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ

(ಸಾಕ್ಷಿದಾರರ ಸಹಿ) ಸಹಿ

ಹಿರಿಯ ಸಿವಿಲ್ ನ್ಯಾಯಾಧೀಶರು
ವಿರಾಜಪೇಟೆ.